C.W. 10 PW 9

# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ. ನಂ. 1312/2020**

ಸಿ.ಡಬ್ಲ್ಯು 10

ಪಿ.ಡಬ್ಲ್ಯು 9

ಸಾಕ್ಷಿದಾರರ ಹೆಸರು – ತಿಮ್ಮಣ್ಣ ಗೌಡ

ತಂದೆಯ ಹೆಸರು – ಜಟ್ಟು ಗೌಡ

ವಯಸ್ಸು – 27 ವರ್ಷ

ಉದ್ಯೋಗ – ಕೂಲಿ ಕೆಲಸ

ವಾಸ್ತವ್ಯ – ಉಂಚಗಿ

(ಇಂದು ದಿನಾಂಕಃ 25-11-2024 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನಗೆ ಚಾ.ಸಾ. 1 ರವರ ಪರಿಚಯ ಇಲ್ಲ. ನನಗೆ ಆರೋಪಿತರ ಪರಿಚಯ ಇಲ್ಲ. ಈ ಪ್ರಕರಣದಲ್ಲಿ ಯಾರ ಬೈಕ ಹಾಗೂ ಯಾರು ಕಳ್ಳತನ ಮಾಡಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ನಾನು ಯಾವುದೇ ವ್ಯಕ್ತಿಯ ಬೈಕನ್ನು ಹುಡುಕಾಡಿದಾಗಲಿ ಹಾಗೂ ನೋಡಿದಾಗಲಿ ಇರುವುದಿಲ್ಲ. ನನಗೆ ಯಾವುದೇ ಆರೋಪಿತನನ್ನು ಪೊಲೀಸ್ ಠಾಣೆಯಲ್ಲಿ ತೋರಿಸಿದ್ದು ಇರುವುದಿಲ್ಲ. ಹಾಗೂ ಆರೋಪಿತರು ಎ ವಿ ಬಾಳಿಗಾ ಕಾಲೇಜ್ ಬಳಿ ಬೈಕ ಇಟ್ಟಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಈ ಬಗ್ಗೆ ಯಾವುದೇ ಹೇಳಿಕೆಯನ್ನು ನೀಡಿದ್ದು ಇರುವುದಿಲ್ಲ. ಕಳ್ಳತನ ಹೇಗೆ ಆಯಿತು ಎಂಬ ಬಗ್ಗೆ ನನಗೆ ಈವರೆಗೂ ತಿಳಿದಿದ್ದು ಇರುವುದಿಲ್ಲ.

C.W. 10 PW 9

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿಃ 21-11-2018 ರಂದು ನಾನು ಕುಮಟಾದ ಮಣಕಿ ಮೈದಾನದಲ್ಲಿ ಕುಮಟಾ ಉತ್ಸವ ನೋಡಿ ವಾಪಸ್ ಮನೆಗೆ ಬರುತ್ತಿರುವಾಗ ಮೈದಾನದ ಗೇಟ್ ಹತ್ತಿರ ಚಾ.ಸಾ. 1 ರವರು ತಮ್ಮ ಮೋಟಾರ್ ಸೈಕಲ್ ಕಾಣೆಯಾದ ಬಗ್ಗೆ ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮೈದಾನದಲ್ಲಿ ಕಾರ್ಯಕ್ರಮವನ್ನು ನೋಡಲು ಬೈಕನಲ್ಲಿ ಬಂದು ಮೈದಾನಲ್ಲಿ ನಿಲ್ಲಿಸಿಟ್ಟು ಹೋಗಿದ್ದು, ಕಾರ್ಯಕ್ರಮ ನೋಡಿ ಬರುವಷ್ಟರಲ್ಲಿ ಮೋಟಾರ ಸೈಕಲ್ ಕಾಣೆಯಾಗಿದ್ದು ಇರುತ್ತದೆ ಎಂದು ಚಾ.ಸಾ. 1 ರವರು ನನಗೆ ತಿಳಿಸಿದ್ದು ಇರುತ್ತದೆ ಎಂದರೆ ಸರಿಯಲ್ಲ. ಕೂಡಲೇ ನಾವೆಲ್ಲರೂ ಸೇರಿ ಅಕ್ಕಪಕ್ಕದ ಸ್ಥಳದಲ್ಲಿ ಹುಡುಕಾಡಿದರು ಮೋಟಾರ್ ಸೈಕಲ್ ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿಃ 07-12-2018 ರಂದು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 14-05-2019 ರಂದು ಚಾ.ಸಾ. 1 ರವರ ಮೋಟಾರ ಸೈಕಲ್ ಪೊಲೀಸರಿಗೆ ಸಿಕ್ಕಿದ ಬಗ್ಗೆ ಗೊತ್ತಾಗಿ ನಾನು ಪೊಲೀಸ್ ಠಾಣೆಗೆ ಬಂದು ಪೊಲೀಸ್ ಠಾಣೆಯಲ್ಲಿ ಇಟ್ಟ ಮೋಟಾರ್ ಸೈಕಲ ನಂ. ಕೆಎ-47-ಇ-2604 ಕಪ್ಪು ಮತ್ತು ನೀಲಿ ಬಣ್ಣದ ಹಿರೋ ಹೊಂಡಾ ಸ್ಪೆಂಡರ್ ಬೈಕನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಮೋಟಾರ್ ಸೈಕಲನ್ನು ಯಾರೋ ಕಳುವು ಮಾಡಿ ಎ ವಿ ಬಾಳಿಕಾ ಕಾಲೇಜ್ ಶೆಡ್ ನಲ್ಲಿ ನಿಲ್ಲಿಸಿಟ್ಟು ಹೋಗಿದ್ದನ್ನು ವಶಪಡಿಸಿಕೊಂಡ ಬಗ್ಗೆ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ದಿಃ 28-06-2019 ರಂದು ಮೋಟಾರ್ ಸೈಕಲ್ ಕಳ್ಳತನ ಕೇಸ್ ನಲ್ಲಿ ಒಬ್ಬ ಕಳ್ಳನನ್ನು ಹಿಡಿದ ವಿಷಯ ಗೊತ್ತಾಗಿ ನಾನು ಠಾಣೆಗೆ ಬಂದು ಆತನ ಹೆಸರು ನಾಸೀರ್ ಅಬ್ದುಲ್ ರೆಹಮಾನ, ವನ್ನಳ್ಳಿ ಕುಮಟಾ ಎಂದು ನನಗೆ ತಿಳಿಸಿದರು ಎಂದರೆ ಸರಿಯಲ್ಲ. ಅಲ್ಲದೇ ಇತನು 1 ಮತ್ತು 2 ನೇ ಆರೋಪಿಯೊಂದಿಗೆ ಸೇರಿ ದಿಃ 21-11-2018 ರಂದು ರಾತ್ರಿ 11.00 ಗಂಟೆಗೆ ಮಣಕಿ ಮೈದಾನಲ್ಲಿ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿಟ್ಟ ಬೈಕನ್ನು ಡೈರೆಕ್ಟ ಮಾಡಿಕೊಂಡು 3 ಜನರು ಸೇರಿ ಕೆಲವು ದಿವಸಗಳ ಕಾಲ ತಿರುಗಾಡಿ ಬಾಳಿಗಾ ಕಾಲೇಜು ಬೈಕ್ ಶೆಡ್ ನಲ್ಲಿ ನಿಲ್ಲಿಸಿಟ್ಟು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲದೇ ಸದರಿ ಮೋಟಾರ್ ಸೈಕಲ್ ಕಳ್ಳತನ ಮಾಡಿದ ಹಾಗೂ ಮೋಟಾರ್ ಸೈಕಲ್ ಬಿಟ್ಟು ಹೋದ ಸ್ಥಳ ನನಗೆ ಗೊತ್ತಾಯಿತು ಎಂದರೆ

ಸರಿಯಲ್ಲ. ದಿಃ 02-07-2019 ರಂದು ಈದೇ ಪ್ರಕರಣದಲ್ಲಿ ಉಳಿದೆರಡು ಆರೋಪಿಗಳನ್ನು ಠಾಣೆಗೆ ತಂದ ಬಗ್ಗೆ ಗೊತ್ತಾಗಿ ನಾನು ಠಾಣೆಗೆ ಬಂದು ನೋಡಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲಿ ಅವರುಗಳ ಹೆಸರುಗಳನ್ನು ಕೇಳಲಾಗಿ ಅವರು ಈ ಪ್ರಕರಣದ 1 ಮತ್ತು 2 ನೇ ಆರೋಪಿರು ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ತಾವು 3 ನೇ ಆರೋಪಿಯೊಂದಿಗೆ ಸೇರಿ ಮೋಟಾರ್ ಸೈಕಲ್ ಕಳ್ಳತನ ಮಾಡಿದ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಕುಮಟಾ ಪೊಲೀಸ್ ಠಾಣೆಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿ.ಪಿ. 13 ರಿಂದ 16 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 13 ರಿಂದ 16 ರಂತೆ ಹೇಳಿಕೆಯನ್ನು ನೀಡಿದ್ದರು ಸಹ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು –ಆರೋಪಿ ಪರ ಶ್ರೀ ಪಿ.ಎಸ್.ಎನ್. ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರ.ದ.ನ್ಯಾ.ದಂ. ಕುಮಟಾ